## ಶ್ರೇಷ್ಠ ಯುವ ಕೃಷಿಕ

**ತಾಲೂಕು : ಶಿರಸಿ**



ಹೆಸರು: ನರೇಂದ್ರ ರಾಜಶೇಖರ್ ಪೇಟೆಗೌಡ್ರ
ಊರು: ಕಾಂತ್ರಾಜಿ
ತಾಲೂಕ: ಶಿರಸಿ
ಜಿಲ್ಲೆ: ಉತ್ತರ ಕನ್ನಡ
ದೂ.ಸಂ: 08384–264457, ಮೊ;9480211055

### ವಿಶೇಷ ಸಾಧನೆಗಳು :

- ಬಿ.ಎ ಪದವಿಧರರಾದ ನರೇಂದ್ರ ಪೇಟೆಗೌಡ್ರ ಅವರದು 34 ಜನ ಹೊಂದಿರುವ ತುಂಬು ಕುಟುಂಬ
- ಒಟ್ಟು 41 ಎಕರೆ ಕ್ಷೇತ್ರ ಹೊಂದಿರುವ ಇವರು ಶೇಂಗಾ, ಉದ್ದು, ಹೆಸರು, ಮಡಿಕೆಗಳನ್ನು ಕೃಷಿಯಾಗಿ ಹಾಗೂ ತೋಟಗಾರಿಕೆ ಬೆಳೆಗಳಾಗಿ ಅಡಿಕೆ, ಬಾಳೆ, ಕಾಳುಮೆಣಸು, ಏಲಕ್ಕಿ ಬೆಳೆಯುತ್ತಿದ್ದಾರೆ.
- ಇದಲ್ಲದೇ ಮೀನುಗಾರಿಕೆ ಹಾಗೂ ಜೇನು ಸಾಕಾಣಿಕೆ ಕೂಡ ಮಾಡಿರುವ ಇವರು ಸಾವಯುವ ಕೃಷಿ ಹಾಗೂ ಜೈವಿಕ ಪೀಡೆನಾಶಕಗಳನ್ನು ಬಳಸುತ್ತಿದ್ದಾರೆ.
- ಇವರು ಒಟ್ಟು 10 ಎಮ್ಮೆ, 5 ಆಕಳು, 5 ಮಿಶ್ರತಳಿ ಹಾಗೂ 8 ಎತ್ತುಗಳನ್ನು ಹೊಂದಿರುವ ಸಮೃದ್ಧವಾದ ಹೈನುಗಾರಿಕೆ ಕೂಡ ಹೊಂದಿದ್ದಾರೆ.





## ಶ್ರೇಷ್ಠ ಯುವ ಕೃಷಿ ಮಹಿಳೆ

**ತಾಲೂಕು : ಶಿರಸಿ**

ಹೆಸರು : ನಂದಜಾ ಪ್ರದೀಪ ಹೆಗಡೆ
ಊರು : ಕಕ್ಕಳ್ಳಿ
ತಾಲೂಕ : ಶಿರಸಿ
ಜಿಲ್ಲೆ : ಉತ್ತರ ಕನ್ನಡ



### ವಿಶೇಷ ಸಾಧನೆಗಳು :

- **B.com** ಪದವೀಧರರಾದರೂ ಸಹಿತ ಕೃಷಿಯನ್ನು ಎತ್ತಿ ಹಿಡಿದ ಮಹಿಳೆ ಇವರು.
- ಒಟ್ಟು 16 ಎಕರೆ ಒಣಬೇಸಾಯ, ನೀರಾವರಿ ಭೂಮಿಯನ್ನು ಹೊಂದಿದ್ದು ಕಬ್ಬು, ಅಡಿಕೆ, ಭತ್ತ, ತರಕಾರಿ, ತೆಂಗು, ಕಾಳುಮೆಣಸು , ಅರಿಶಿನ, ಶುಂಠಿ, ಕೊಕೋ, ಏಲಕ್ಕಿ, ಜಾಯಿಕಾಯಿ, ಬಾಳೆ ಬೆಳೆಗಳನ್ನು ಬೇರೆ ಬೇರೆ ಕೃಷಿ ಪದ್ದತಿಯಲ್ಲಿ ಬೆಳೆಯುತ್ತಿದ್ದಾರೆ.
- ಇದಲ್ಲದೆ ಸಾವಯುವ ಗೊಬ್ಬರ ಮತ್ತು ಜೈವಿಕ ಪೀಡೆನಾಶಕಗಳನ್ನು ಬಳಸುತ್ತಿದ್ದು ಹೈನುಗಾರಿಕೆಯನ್ನು ಮಾಡುತ್ತಿರುವ ಇವರು ಅರಗು ಕೃಷಿ ಜೊತೆಗೆ ಸಿಹಿ ನೀರಿನ ಮುತ್ತು ಕೃಷಿ, ಕಸಿಕಟ್ಟುವುದು ಮತ್ತು ಬೋನ್ಸಾಯಿ ಕೂಡ ಮಾಡುತ್ತಿದ್ದಾರೆ.
- ಇವರು ಟ್ರಾಕ್ಟರ್, ಸಿಂಪರಕಗಳು,ಕಳೆ ತೆಗೆಯುವ ಯಂತ್ರಗಳು ಟಿಲ್ಲರ್, ಮಿಸ್ಟಬ್ಲೋದರ್ ನಂತಹ ಕೃಷಿ ಯಂತ್ರೋಪಕರಣಗಳನ್ನು ಹೊಂದಿರುತ್ತಾರೆ.
- ತೋಟದಲ್ಲಿ ಹನಿ ನೀರಾವರಿ, ಸಿಂಚನ ನೀರಾವರಿ ಮತ್ತು ಬಸಿಗಾಲುವೆ ವ್ಯವಸ್ಥೆಗಳಿಂದ ನೀರು ಮತ್ತು ಮಣ್ಣು ನಿರ್ವಹಣೆ ಮಾಡುತ್ತಿದ್ದಾರೆ.





## ಶ್ರೇಷ್ಠ ಯುವ ಕೃಷಿಕ

## ತಾಲೂಕು : ಮುಂಡಗೋಡ

ಹೆಸರು: ಮಂಜುನಾಥ ಗಣಪತಿ ಗುಮ್ಮಾನಿ
ಊರು : ಕ್ಯಾತ್ನಳ್ಳಿ
ತಾಲೂಕ : ಮುಂಡಗೋಡ
ಜಿಲ್ಲಾ : ಉತ್ತರ ಕನ್ನಡ
ದೂ.ಸಂ: 08301–270372 ಮೊ: 8762327072



### ವಿಶೇಷ ಸಾಧನೆಗಳು :

- **B.com, LLB** ವಿದ್ಯಾರ್ಹತೆಯನ್ನು ಪಡೆದಿರುವ ಇವರು ಒಟ್ಟು 18.19 ಎಕರೆ ಒಣಬೇಸಾಯ ಮತ್ತು ನೀರಾವರಿ ಭೂಮಿಯನ್ನು ಹೊಂದಿರುತ್ತಾರೆ.
- ಇವರು ಭತ್ತ, ಹೆಸರು, ಉದ್ದು, ಸಾಸಿವೆಯನ್ನು ಆಹಾರ ಬೆಳೆಗಳಾಗಿ ಅಡಿಕೆ, ಬಾಳೆ, ಏಲಕ್ಕಿ, ಕಾಳುಮೆಣಸು,ಕೊಕೋ, ಗೇರು, ಮಾವು, ಹಾಗೂತೆಂಗು ಬೆಳೆಗಳನ್ನು ತೋಟಗಾರಿಕಾ ಬೆಳೆಗಳಾಗಿ ಬೆಳೆಯುತ್ತಿದ್ದು, ಇದರ ಜೊತೆಗೆ ಜೇನು ಕೃಷಿ, ಹೈನುಗಾರಿಕೆ ಕೃಷಿ, ಅರಣ್ಯದಂಥಹ ಉಪಕಸುಬುಗಳನ್ನೂ ಸಹ ಮಾಡುತ್ತಿದ್ದಾರೆ.
- ಇದಲ್ಲದೆ ಸಾವಯುವ ಗೊಬ್ಬರ, ಜೈವಿಕ ಗೊಬ್ಬರ, ಜೈವಿಕ ಅನಿಲ ಬಳಕೆಯನ್ನು ಮಾಡಿ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.
- ಹನಿ ನೀರಾವರಿ, ಹರಿ ನೀರಾವರಿ, ಸಿಂಚನ ನೀರಾವರಿ ಮತ್ತು ಬಸಿಗಾಲುವೆ ವ್ಯವಸ್ಥೆ ಮೂಲಕ ನೀರು ನಿರ್ವಹಣೆ ಮಾಡುತ್ತಿದ್ದಾರೆ.
- ಹೈನುಗಾರಿಕೆಯಲ್ಲಿ 8 ಹಿಂಡುವ ಆಕಳು (ಸ್ವದೇಶಿ), 6 ಎಮ್ಮೆ, 2 ಹೂಡುವ ದನ, 2 ಕೋಣ ಹೊಂದಿದ್ದು ಟ್ರ್ಯಾಕ್ಟರ್, ಬೀಜ ಹಾಗೂ ಗೊಬ್ಬರ ಬಿತ್ತುವ ಯಂತ್ರ ,ಸಿಂಪರಕಗಳು, ಕಳೆ ತೆಗೆಯುವ ಯಂತ್ರ, ಕೊಯ್ಲು ಮತ್ತು ರಾಶಿ ಮಾಡುವ ಯಂತ್ರ, ಮೇವು ಕತ್ತರಿಸುವ ಯಂತ್ರ, ಧಾನ್ಯ ಸಂಸ್ಕರಣಾ ಉಪಕರಣದಂತಹ ಕೃಷಿ ಯಂತ್ರೋಪಕರಣಗಳನ್ನು ಬಳಸಿ ಆಳುಗಳ ಕೊರತೆ ನಿರ್ವಹಿಸುತ್ತಿದ್ದಾರೆ.
- ಭತ್ತದಲ್ಲಿ ಶ್ರೀ ಪದ್ದತಿ ಯಂತ್ರಚಾಲಿತ ಸಸಿ ನಾಟಿ ಮತ್ತು ತೋಟಗಾರಿಕೆಯಲ್ಲಿ ಸಮಗ್ರ ಕೃಷಿ ಪದ್ದತಿಯಿಂದ ವಿಶೇಷ ಸಾಧನೆ ಮಾಡಿದ್ದಾರೆ.





**ಶ್ರೇಷ್ಠ ಯುವ ಕೃಷಿಕ** **ತಾಲೂಕು : ಸಿದ್ದಾಪುರ**



ಹೆಸರು : ಶ್ರೀ. ನಿರಂಜನ ಶ್ರೀಧರ ಭಟ್ಟ
ಊರು : ಹೋಸ್ತೋಟ
ತಾಲೂಕ : ಸಿದ್ದಾಪುರ
ಜಿಲ್ಲಾ : ಉತ್ತರಕನ್ನಡ
ದೂರವಾಣಿ : 08389–249437 ಮೊ: 9449192329

**ವಿಶೇಷ ಸಾಧನೆಗಳು :**

- ಬಿ.ಹೆಚ್.ಎಮ್.ಎಸ್ ಮುಗಿಸಿಕೊಂಡು ಕೃಷಿಯನ್ನು ನಂಬಿದ ನಿರಂಜನ ಭಟ್ಟರವರು ಉತ್ಸಾಹಿ ಯುವ ಕೃಷಿಕರಾಗಿದ್ದು ಯುವಕ ಸಂಘ, ಕೆ.ಡಿ.ಸಿ.ಸಿ ಬ್ಯಾಂಕ ಹಾಗೂ ಟಿಎಸೆಸ್, ಟಿ.ಎಮ್.ಎಸ್ ನಂತಹ ಅನೇಕ ಸಂಸ್ಥೆಗಳ ಸದಸ್ಯರಾಗಿದ್ದಾರೆ. ಸ್ವತಃ ವೈದ್ಯರಾಗಿರುವುದರಿಂದ ಸಾಯಾಂಕಾಲ ಉಚಿತ ವೈದ್ಯಕೀಯ ಸೇವೆ ನೀಡುವ ಮೂಲಕ ಗ್ರಾಮ ಆರೋಗ್ಯ ರಕ್ಷಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ. ಅಲ್ಲದೇ ಶ್ರೀ ವಿವೇಕಾನಂದ ಪ್ರೌಢಶಾಲೆ, ಹೆಗ್ಗರಣೆ ಇದರ ಟ್ರಸ್ಟೀ ಆಗಿದ್ದು ಸಾಮಾಜಿಕ ಸಹಬಾಗಿತ್ವದಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಿದ್ದಾರೆ.
- ಒಟ್ಟು 6.30 ಎಕರೆ ಸಾಗುವಳಿ ಕ್ಷೇತ್ರದ ಸುಮಾರು 3.5 ಎಕರೆ ಪ್ರದೇಶದಲ್ಲಿ ಭತ್ತವನ್ನು ಬೆಳೆಯುತ್ತಿದ್ದು ಉಳಿದ ಕ್ಷೇತ್ರದಲ್ಲಿ ಅಡಿಕೆ ಆಧಾರಿತ ಬಹು ಮಹಡಿ ಪದ್ಧತಿಯಲ್ಲಿ ಕಾಳು ಮೆಣಸು, ಕೊಕೊ, ಏಲಕ್ಕಿ, ತೆಂಗು, ಜಾಯಿಕಾಯಿ ಇತರೆ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆಯುತ್ತಿದ್ದಾರೆ.
- ಬೇಸಿಗೆಯಲ್ಲಿ 1/2 ಎಕರೆ ಪ್ರದೇಶದಲ್ಲಿ ಗ್ಲಾಡಿಯೋಲಸ್ ಪುಷ್ಪ ಕೃಷಿಯನ್ನು ಮಾಡುತ್ತಿದ್ದು ಬೆಂಗಳೂರಿಗೆ ರಫ್ತು ಮಾಡುತ್ತಿರುತ್ತಾರೆ ಅಲ್ಲದೇ ವಿವಿಧ ತರಕಾರಿ ಬೆಳೆಗಳಾದ ಹರವೆ, ರಾಜಗಿರಿ, ನವಿಲುಕೋಸು, ಮೂಲಂಗಿ, ಕ್ಯಾರೆಟ್, ದೊಣ್ಣಮೆಣಸು ಇತ್ಯಾದಿಗಳನ್ನು ಬೆಳೆಯುತ್ತಿದ್ದು ಸ್ವಾವಲಂಬಿಯಾಗಿದ್ದಾರೆ.
- ತಮ್ಮದೇ ಆದ ಕುಟೀರದಲ್ಲಿ ಕೃಷಿ ಪ್ರವಾಸೋದ್ಯಮಕ್ಕೆ ಚಾಲನೆ ನೀಡಿದ್ದು ಹೋಮ್ ಸ್ಟೇ ಮೂಲಕ ಮಲೆನಾಡಿನ ಕೃಷಿ ಪದ್ಧತಿ ಹಾಗೂ ತಿನಿಸುಗಳನ್ನು ಪ್ರವಾಸಿಗರಿಗೆ ಜನಪ್ರಿಯಗೊಳಿಸುತ್ತಿದ್ದಾರೆ.





## ಶ್ರೇಷ್ಠ ಯುವ ಕೃಷಿ ಮಹಿಳೆ

## ತಾಲೂಕು : ಸಿದ್ದಾಪುರ



ಹೆಸರು : ಗೀತಾ ಸದಾನಂದ ಹೊಸ್ಮನೆ
ಊರು : ಬಾಳೆಕೊಪ್ಪ
ತಾಲೂಕ : ಸಿದ್ದಾಪುರ
ಜಿಲ್ಲಾ : ಉತ್ತರ ಕನ್ನಡ

### ವಿಶೇಷ ಸಾಧನೆಗಳು :

- ಸಿದ್ದಾಪುರ ತಾಲೂಕಿನ ಬಾಳೆಕೊಪ್ಪ ಗ್ರಾಮದಲ್ಲಿ 1.3 ಎಕರೆ ಭೂಮಿ ಹೊಂದಿರುವ ಗೀತಾ ಹೊಸ್ಮನೆಯವರು ಕೃಷಿಯನ್ನು ಲಾಭದಾಯಕವಾಗಿ ಮಾಡಿದ್ದಾರೆ.
- ಕಸಿ ಮಾಡುವುದನ್ನು ಕರಗತ ಮಾಡಿಕೊಂಡಿರುವ ಇವರು, ಜಾಯಿಕಾಯಿ, ಮೆಣಸು, ಚಿಕ್ಕು, ಹಲಸು ಇತ್ಯಾದಿ ಸಸಿಗಳನ್ನು ಕಸಿ ಮಾಡಿ ಮಾರಾಟ ಮಾಡುತ್ತಿದ್ದಾರೆ.
- ತೋಟಗಾರಿಕೆ ಬೆಳೆಗಳಾದ ಬಾಳೆ, ಜಾಯಿಕಾಯಿ, ಲವಂಗ, ಕೊಕೋ, ಹಾಗೂ ತೆಂಗನ್ನು ಬೆಳೆಯುತ್ತಿರುವ ಇವರು 500 ಕ್ಕೂ ಹೆಚ್ಚು ಇಂಧನ ಗಿಡಗಳನ್ನು ಸಹ ಬೆಳೆಯುತ್ತಿದ್ದಾರೆ.
- ಹೈನುಗಾರಿಕೆ ಮತ್ತು ಜೇನು ಕೃಷಿಗಳು ಇವರ ಉಪಕಸುಬುಗಳಾಗಿವೆ.
- ರೈಜೋಬಿಯಂ, ವ್ಯಾಮ್ ಹಾಗೂ ಜೈವಿಕ ಪೀಡೆನಾಶಕ ಬಳಸಿ ಸಾವಯುವ ಕೃಷಿ ಮಾಡುತ್ತಿದ್ದಾರೆ.
- ಬೆಟ್ಟದಲ್ಲಿ ಕೃಷಿ ಹೊಂಡ, ಜೈವಿಕ ಬದುಗಳನ್ನು ಮಾಡಿ ನೀರಿನ ಹಾಗೂ ಮಣ್ಣಿನ ಸಂರಕ್ಷಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ.
- ಒಟ್ಟು 1.3 ಎಕರೆಗಳಿಂದ ವಾರ್ಷಿಕ 2,35,000 ಗಳಿಸುವ ಇವರು ಕೃಷಿಯನ್ನು ಕೌಟುಂಬಿಕ ವೃತ್ತಿಯಾಗಿಸಿಕೊಂಡಿದ್ದಾರೆ.





**ಶ್ರೇಷ್ಠ ಯುವ ಕೃಷಿಕ** **ತಾಲೂಕು : ಭಟ್ಕಳ**



ಹೆಸರು : ವಾಗೇಶ ಹೆಬ್ಬಾರ
ಊರು : ಹೇರೂರು
ತಾಲೂಕ: ಭಟ್ಕಳ
ಜಿಲ್ಲೆ : ಉತ್ತರ ಕನ್ನಡ
ದೂ.ಸಂ: 9341287312,9916945111,9741140604

## ವಿಶೇಷ ಸಾಧನೆಗಳು :

- ಬಿ ಎ, ಎಲ್ ಎಲ್ ಬಿ ಪದವೀಧರರಾದ ವಾಗೇಶ ಹೆಬ್ಬಾರ ಅವರು 4.12 ಎಕರೆ ಕ್ಷೇತ್ರ ಹೊಂದಿರುವ ಪ್ರಗತಿಪರ ರೈತರು
- ಇವರು ಪ್ರಧಾನವಾಗಿ ಸಾವಯುವ ಕೃಷಿ, ಜೈವಿಕ ಕೃಷಿ ಹಾಗೂ ಶೂನ್ಯ ಕೃಷಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ.
- ಇವರ ಸಾಂಬಾರ ಬೆಳೆಗಳಾದ ಲವಂಗಾ, ಜಾಯಿಕಾಯಿ, ಕಾಳಮೆಣಸು, ಅರಿಶಿಣ, ಶುಂಠಿ, ಹಣ್ಣಿನ ಬೆಳೆಗಳಾದ ಅನಾನಸ್, ಬಾಳೆ, ಲಿಂಬೆ, ಹಾಗೂ ವಾರ್ಷಿಕ ಬಹುಬೆಳೆಗಳಾದ ಅಡಿಕೆ, ತೆಂಗು, ಕೊಕೋ ಗಳನ್ನು ಬೆಳೆಯುತ್ತಿದ್ದಾರೆ.
- ಕಂಟೂರ್ ಬಂಡ್ಸ್ ಮತ್ತು ಹಳ್ಳದ ಪಕ್ಕದಲ್ಲಿ ಕಳ್ಳಿ, ಲಕ್ಕಿಗಿಡ, ಮಂಡಗಿ, ಗೊಬ್ಬರಗಿಡದಂತಹ ಜೈವಿಕ ಬದು ನಿರ್ಮಾಣ ಮಾಡಿ ಮಣ್ಣಿನ ನಿರ್ವಹಣೆ ಮಾಡಿರುವುದಲ್ಲದೇ ಹನಿ ನೀರಾವರಿ ಮತ್ತು ಸಿಂಚನ ನೀರಾವರಿಯಿಂದ ನೀರಿನ ನಿರ್ವಹಣೆ ಮಾಡುತ್ತಿದಾರೆ.
- ಈ ಎಲ್ಲಾ ಚಟುವಟಿಕೆಯಿಂದ ಒಟ್ಟು ಆದಾಯ 3–3.5 ಲಕ್ಷ ಎಂದು ಈ ನ್ಯಾಯವಾದಿ ಹೆಮ್ಮೆಯಿಂದ ಹೇಳುತ್ತಾರೆ.





## ಶ್ರೇಷ್ಠ ಯುವ ಕೃಷಿ ಮಹಿಳೆ                ತಾಲೂಕು : ಭಟ್ಕಳ



ಹೆಸರು: ಸುಜಾತ ರವಿ ಗೊಂಡ
ಊರು: ಮಾರುಕೇರಿ
ತಾಲೂಕ: ಭಟ್ಕಳ
ಜಿಲ್ಲೆ: ಉತ್ತರ ಕನ್ನಡ

### ವಿಶೇಷ ಸಾಧನೆಗಳು :

- ಇವರು 2.14 ಎಕರೆ ಒಣಬೇಸಾಯ ಮತ್ತು ನೀರಾವರಿ ಭೂಮಿಯನ್ನು ಹೊಂದಿದ್ದು ಭತ್ತ, ಅಡಿಕೆ, ತೆಂಗು, ಏಕ ಬೆಳೆಯಾಗಿ, ಹಾಗೂ ಜಾಯಿಕಾಯಿ, ಬಾಳೆ, ಅನನಾಸ್‌ನ್ನು ಅಂತರ್ ಬೆಳೆಯಾಗಿ, ವಿಳ್ಯದೆಲೆ, ಕಾಳುಮೆಣಸನ್ನು ಮಿಶ್ರಬೆಳೆಯಾಗಿ ಬೆಳೆಯುತ್ತಿದ್ದಾರೆ.
- ಕೃಷಿ ಜೊತೆಗೆ ಹೈನುಗಾರಿಕೆ ಮಾಡುತ್ತಿದ್ದು 11 ಜಾನುವಾರುಗಳು ಹಾಗೂ 4 ಕೋಳಿಯನ್ನು ಹೊಂದಿರುವ ಇವರು 1/2 ಎಕರೆ ಹಿಪ್ಪು ನೇರಳೆ ಬೇಸಾಯ ಮತ್ತು ಅರಣ್ಯ ಕೃಷಿ ಮಾಡುತ್ತಿದ್ದಾರೆ.
- ಇದಲ್ಲದೆ ಎರೆಗೊಬ್ಬರ, ಕೊಟ್ಟಿಗೆ ಗೊಬ್ಬರ, ಜೈವಿಕ ಗೊಬ್ಬರಗಳ ಬಳಕೆ ಮಾಡುತ್ತಿದ್ದು ಕೃಷಿ ಯಂತ್ರೋಪಕರಣಗಳಾದ ಸಿಂಪರಕಗಳು, ಕಳೆತೆಗೆಯುವ ಯಂತ್ರಗಳು, ಧಾನ್ಯ ಸಂಸ್ಕರಣಾ ಉಪಕರಣಗಳನ್ನು ಬಳಸಿ ಆಳುಗಳ ಕೊರತೆ ನಿರ್ವಹಿಸುತ್ತಿದ್ದಾರೆ.
- ಭತ್ತವನ್ನು ಶ್ರೀ ಪದ್ಧತಿಯಲ್ಲಿ ಬೆಳೆಯುತ್ತಿದ್ದು ಯಾವುದೇ ರಾಸಾಯನಿಕ ಗೊಬ್ಬರ ಬಳಸದೆ ಸಾವಯುವ ಕೃಷಿ ನಡೆಸುತ್ತಿದ್ದಾರೆ.